# ಬೇಗ ಬಾ ಮಳೆ



ಮಳೆಯೇ ಮಳೆಯೇ ಬೇಗ ಬಾರಣ್ಣಾ,
ಮೋಡದ ಮೇಲೆ ಕುಳಿತು ಮುನಿಸೇಕಣ್ಣಾ.

ಬೇಸಿಗೆ ಬಿಸಿಲಿಗೆ ಉರಿದಿದೆ ಧರೆ
ಬಾಯಾರಿದ ಭೂಮಿಗೆ ಬತ್ತಿದ ಸೆಲೆ
ರೈತರ ಗೋಳನು ಕೇಳೋ ದೊರೆ
ಜೀವಜಗತ್ತಿಗೂ ನೀನೇ ಆಸರೆ.

ಗುಡುಗು ಸಿಡಿಲಿನ ಅಬ್ಬರ ಬೇಡಾ
ತೊಟ್ಟಿಲ ತಂಗಿ ಹೆದರುವುದು ನೋಡಾ
ಮಿಂಚಿನ ಬಳ್ಳಿಗೆ  ಹಾಕಿದರೆ ಗಂಟು
ಕೊಡುತ್ತಾಳಂತೆ ಅಮ್ಮ
ಆಕಾಶದಗಲದ ಚಾಕೊಲೇಟು.

ಮಣ್ಣ ನೀರಿನಲಿ ಮೀಯಬೇಕಾಗಿದೆ
ಆಲಿಕಲ್ಲಿಗಾಗಿ ಬಾಯಿ ನೀರೂರಿದೆ.
ಕಪ್ಪೆಯ ವಟ ವಟ ಸದ್ದು ಸಾಕಾಗಿದೆ
ದೊಪ್ಪನೆ ಸುರಿ ಈ ಧರೆಗೆ.

ಮಳೆಯೇ ಮಳೆಯೇ ಬೇಗ ಬಾರಣ್ಣ,
ಮೋಡದ ಮೇಲೆ ಕುಳಿತು ಮುನಿಸೇಕಣ್ಣಾ
ಈ ಪರಿ ಬರದ ಬವಣೆ ಸಾಕಣ್ಣಾ
ನಮ್ಮಯ ಕೋರಿಕೆ ಈಡೇರಿಸಣ್ಣಾ.

**–ದೀಕ್ಷಾ ದತ್ತಾತ್ರೇಯ, ಯಲ್ಲಾಪುರ**

---

# ತಾನೊಂದು ಬಗೆದರೆ..



ಧರ್ಮಯ್ಯ ಮತ್ತು ರಾಮಯ್ಯ ಒಂದೇ ಊರಿನ ನಿವಾಸಿಗಳು. ಧರ್ಮಯ್ಯ ತನ್ನ ಕಾರ್ಯದಕ್ಷತೆ– ಜನಸೇವೆ– ಧರ್ಮ ಆಚರಣೆಗಳಿಂದ ಸಹಜವಾಗಿ ಧರ್ಮಯ್ಯನಾಗಿದ್ದ. ಊರಿನ ಯಾವುದೇ ಮನೆಯಲ್ಲಿ ಶುಭ– ಅಶುಭ ಕಾರ್ಯಗಳು ನಡೆದರೆ ತಾನೇ ಟೊಂಕಕಟ್ಟಿ ನಿಂತು ಕಾರ್ಯಕ್ರಮ ಮುಗಿಸಿ ಕೈಲಾದ ಸಹಾಯ ಮಾಡಿ ಬರುತ್ತಿದ್ದ. ಹಾಗಾಗಿ ಧರ್ಮಯ್ಯನ ಹೆಸರು ಊರಿಂದ ಊರಿಗೆ ಹಬ್ಬಿ ಆ ಪ್ರಾಂತ್ಯದ ಜನರೆಲ್ಲರಿಗೂ ಧರ್ಮಯ್ಯನೇ ಆಗಿದ್ದನು.

ಇನ್ನು ರಾಮಯ್ಯ ಬಡ್ಡಿ ವ್ಯಾಪಾರಿ. ಹಗಲಿರುಳು ಲೇವಾದೇವಿ– ಬಡ್ಡಿ ವಸೂಲಿ. ಅದೇ ಅವನ ನಿತ್ಯದ ಕಾಯಕ. ಹೇರಳವಾಗಿ ಹಣವಿದ್ದರೂ ಧರ್ಮಯ್ಯನಂತೆ ಜನಪ್ರಿಯತೆ ಪಡೆದಿರಲಿಲ್ಲ. ದಿನೇ ದಿನೇ ಧರ್ಮಯ್ಯನ ಮೇಲಿನ ಮತ್ಸರ ಹೆಚ್ಚಾಗುತ್ತಾ ಬಂದಿತು. ಒಂದು ದಿನ ಸೇಡು ತೀರಿಸಿಕೊಳ್ಳುವ ಸಮಯ ಬಂದೇ ಬಂದಿತು.

ಧರ್ಮಯ್ಯನ ನೌಕರ ಬಸವ ಜ್ವರ ಪೀಡಿತನಾಗಿ ಹಾಸಿಗೆ ಹಿಡಿದ. ಇನ್ನು ತೋಟದ ಕಾವಲಿಗೆ ಒಡೆಯನೇ ಹೋಗಬೇಕಾಯ್ತು. ಸರಿ, ರಾತ್ರಿ ಊಟ ಮಾಡಿ ಕೈಲಿ ಕೋಲು ಹಿಡಿದು ಊರ ಮುಂದಿನ ತೋಟಕ್ಕೆ ಹೊರಟ. ಈ ವಿಚಾರ ರಾಮಯ್ಯನಿಗೆ ತಿಳಿಯಿತು. ಅಂದು ಅಮಾವಾಸ್ಯೆ. 'ಕತ್ತಲಲ್ಲಿ ಯಾರೂ ನೋಡರು' ಎಂದು ಕಂಬಳಿ ಹೊದೆದು, ಕೋಲು ಹಿಡಿದು ಹೊರಟ. ಧರ್ಮಯ್ಯನ ತೋಟದ ಹತ್ತಿರ ಬಂದು ತೋಟದ ತಡಿಕೆ ನೂಕಿ ಒಳಗೆ ಕಾಲಿಟ್ಟ. ಅಷ್ಟರಲ್ಲಿ ಅಲ್ಲೆ ಮಲಗಿದ್ದ ನಾಗರಹಾವು ಕಚ್ಚೇಬಿಟ್ಟಿತು. 'ಅಯ್ಯೋ' ಎಂದು ಜೋರಾಗಿ ಚೀರಿದ.

ಶಬ್ದ ಕೇಳಿದ ಧರ್ಮಯ್ಯ ಬಂದು ನೋಡಿದ. ರಾಮಯ್ಯ ಬಿದ್ದು ನರಳುತ್ತಿದ್ದಾನೆ. ಕೂಡಲೆ ಅವನನ್ನು ಹೆಗಲ ಮೇಲೆ ಹಾಕಿಕೊಂಡು ಊರು ಸೇರಿದ. ಊರಿನ ವೈದ್ಯನನ್ನು ಕರೆಸಿ ಉಪಚಾರ ಮಾಡಿಸಿದ. ಹಸಿರು ಅರೆದು ಕುಡಿಸಿದ. ಬೆಳಗಿನ ವೇಳೆಗೆ ರಾಮಯ್ಯನಿಗೆ ಸ್ಮೃತಿ ಬಂದಿತು. ಎಲ್ಲಾ ವಿಚಾರ ಅರ್ಥವಾಯಿತು. ಧರ್ಮಯ್ಯನ ಕಾಲಿಗೆರಗಿ 'ಕ್ಷಮಿಸಪ್ಪಾ ಕೊಲ್ಲಲು ಬಂದವನನ್ನು ಕಾಪಾಡಿದೆ. ನೀನು ನಿಜವಾಗಿಯೂ ಧರ್ಮಣ್ಣನೇ. ಇನ್ನು ಮುಂದೆ ನಾವಿಬ್ಬರು ಸ್ನೇಹಿತರಾಗಿರೋಣ. ಜನಸೇವೆ ಮಾಡೋಣ. ನೀನು ದೇವರ ಸಮಾನ' ಎಂದು ಕಣ್ಣೀರು ಸುರಿಸಿದನು. 'ಮಾನವ ತಾನೊಂದ ಬಗೆದರೆ ದೇವರು ಇನ್ನೊಂದು ಬಗೆದ'.

**–ವಿ. ಸತ್ಯನಾರಾಯಣರಾವ್, ಯಲಹಂಕ**